**ಸಿ.ಸಿ.ನಂ:38548/2022**
**ಪಿ ಡಬ್ಲೂ:** 1

**ದಿನಾಂಕ: 08.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ಶ್ರೀ. ಮಾನ್ಯ ವಕೀಲರಿಂದ:**

ನಾನು ಬಸವೇಶ್ವರನಗರದಲ್ಲಿರುವ ಅಮರವಾಣಿ ಶಾಲೆಯ ಚೇರಮನ್ ಆಗಿರುತ್ತೇನೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಶಾಲ್ಲೂಕಿನಲ್ಲಿ ನಾಗದೇವನಹಳ್ಳಿ ನಲ್ಲಿ ನನಗೆ ಸೇರಿದ 10 ಎಕರೆ ಜಮೀನು ಇರುತ್ತದೆ, ಬೆಂಗಳೂರಿನಲ್ಲಿ ಬಾಡಿಗೆ ಬರುತ್ತದೆ, ಸಂಜೆ ಸಮಯದಲ್ಲಿ ಗೆಸ್ಟ್ ಲೆಕ್ಚರರ್ ಆಗಿ ಪಾಠ ತೆಗೆದುಕೊಳ್ಳುತ್ತೇನೆ ಮತ್ತು ಬೆಳಗಿನ ಜಾವ ಶಾಲೆಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕಾರಣ ನನಗೆ ಆದಾಯ ಇರುತ್ತದೆ. ಈ ಕಾರ್ಯಗಳನ್ನು ನಾನು 1997 ರಿಂದ ಮಾಡುತ್ತಾ ಬಂದಿರುತ್ತೇನೆ. 2019ನೇ ಸಾಲಿನಿಂದ 2022 ನೇ ಸಾಲಿನ ನನ್ನ ಮಾಸಿಕ ಆದಾಯ ರೂ.50 ಸಾವಿರದಿಂದ ರೂ.60 ಸಾವಿರ ಇರುತ್ತದೆ. ಈ ರೀತಿ ನನ್ನ ಆದಾಯ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಮೇಲೆ ಹೇಳಿದಂತಹ ಕಾರ್ಯಗಳನ್ನು ಹೊರತುಪಡಿಸಿ ನಾನು ಯಾವುದೇ ರೀತಿ ಪಾಲುದಾರರ ನೆಲೆಯಲ್ಲಿ ಕೆಲಸ ಮಾಡಿರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC030899032022/truecopy/order-1.pdf

www.ecourtsindia.com

**ಪಿ ಡಬ್ಲೂ:** 1

ಆರೋಪಿ ನನಗೆ ಸುಮಾರು 20 ರಿಂದ 25 ವರ್ಷಗಳಿಂದ ಪರಿಚಯ. ಆರೋಪಿಯು ಅನಾತಾಶ್ರಮ ನಡೆಸುತ್ತಿರುತ್ತಾರೆ, ಅಬಿಲಾಶ್ರಮ, ಕಿವುಡ್ ಮುಖರರ ಶಾಲೆಗಳು, ಸಾಯಿಬಾಬಾ ದೇವಸ್ಥಾನ ನಡೆಸುತ್ತಿರುತ್ತಾರೆ. ನನ್ನ ಮತ್ತು ಆರೋಪಿ ನಡುವೆ 2017ನೇ ಸಾಲಿನ ತನಕವು ಒಳ್ಳೆಯ ಸಂಬಂಧ ಇದ್ದಿರುತ್ತದೆ. ನಾನು ಹಾಗೂ ಆರೋಪಿಯು ಒಟ್ಟುಗೂಡಿ ಕಾರ್ ಸೆಂಟರ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿ ಅದನ್ನು ಆರೋಪಿ ಪ್ರಾರಂಭಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ಕಾರ್ ಸೆಂಟರ್ ಸಂಸ್ಥೆಯನ್ನು ನಡೆಸುವ ಸಮಯ ಆರೋಪಿಯು ನನ್ನಿಂದ ಸಾಕಷ್ಟು ಬಾರಿ ಹಣ ಪಡೆದಿರುತ್ತಾರೆ. ಸದರಿ ಸಂಸ್ಥೆಯು ಆರೋಪಿಯು 2013 ರಲ್ಲಿ ಪ್ರಾರಂಭಿಸಿರುತ್ತಾರೆ ಆದರೆ ಯಾವ ಸಾಲಿನಲ್ಲಿ ಅದನ್ನು ಮುಚ್ಚಲಾಗಿರುತ್ತದೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಕುಟುಂಬ ಸ್ನೇಹಿತರಾದ ಕಾರಣ ನಾನು ಸದರಿ ಸಂಸ್ಥೆಯ ಸ್ಥಳಕ್ಕೆ ಭೇಟಿ ನೀಡುತ್ತಿದ್ದೆ. ಆ ರೀತಿ ನಾನು ತಿಂಗಳಿಗೆ ಸುಮಾರು 3-4 ಬಾರಿ ಭೇಟಿ ನೀಡಿರುತ್ತೇನೆ. ಸದರಿ ಸಂಸ್ಥೆಯ ನಷ್ಟ ಲಾಭಗಳ ಬಗ್ಗೆ ನನಗೆ ಗೊತ್ತಿರಲಿಲ್ಲ. ಸದರಿ ಸಂಸ್ಥೆ ಸ್ಥಾಪಿಸಲು ನಾನು ಹಾಗೂ ನಾರಾಯಣಗೌಡ ಬಂಡವಾಳ ಹೂಡಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಸಂಸ್ಥೆಯಿಂದ ನಾನು

This is a True Copy of the Court Records Online. Authenticated @ districts.ecourtsindia.com/cnr/KABC030899032022/truecopy/order-1.pdf

www.ecourtsindia.com

ಎಂದೂ ಹಣವನ್ನು ಪಡೆದಿರುವುದಿಲ್ಲ. ಸದರಿ ಸಂಸ್ಥೆಯ ಪಾಲುದಾರ ಸಾಯಿಪಾಲ್ ಎಂದು ಇದ್ದಿರುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವೇಳೆ ಕೋರಿದ್ದರಿಂದ ಮುಂದೂಡಲಾಯಿತು)**

**(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ**

**22 ನೇ ಅಪರ ಮು ಮ ದಂ,**

**ಬೆಂಗಳೂರು ನಗರ.**

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABC030899032022/truecopy/order-1.pdf